**ಸಿವಿಲ್ ಜಡ್ಜ್  ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.427/2018**

| | | |
|---|---|---|
| ಸಾಕ್ಷಿದಾರರ ಹೆಸರುಃ | ಪುಟ್ಟಸ್ವಾಮಿ | ಸಿ ಡಬ್ಲ್ಯೂಃ 4 |
| ತಂದೆಯ ಹೆಸರುಃ | ಚಿಂದಗಿರಿಗೌಡ | ಪಿ ಡಬ್ಲ್ಯೂಃ 3 |
| ವಯಸ್ಸುಃ | 38 ವರ್ಷ | |
| ಉದ್ಯೋಗಃ | ಎ.ಎಚ್‌.ಸಿ, ಇ.ಆರ್.ಎಸ್.ಎಸ್ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಬನ್ನೂರು ಪಟ್ಟಣ | **21.11.2023** |

**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ

ನಾನು ದಿನಾಂಕ 08.01.2015 ರಿಂದ 11.04.2022 ರವರೆಗೆ ಬನ್ನೂರು ಪೊಲೀಸ ಠಾಣೆಯಲ್ಲಿ ಸರ್ಕಾರಿ ಜೀಪ ಚಾಲಕನಾಗಿ ಕೆಲಸ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಆರೋಪಿತರನನ್ನು ನಾನು ನೋಡಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 25.01.2018 ರಂದು ರಾತ್ರಿ 9 ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ-1 ರವರು ನಮ್ಮ ಇಲಾಖಾ ಜೀಪ ನಂ.ಕೆಎ-55-ಜಿ-114 ರಲ್ಲಿ ವಡ್ಗಲರಂಗನಾಥ ಸ್ವಾಮಿ ಬೆಟ್ಟಕ್ಕೆ ಬಂದೋಬಸ್ತ ಕರ್ತವ್ಯಕ್ಕೆ ಹೋಗಿದ್ದು, ಸದರಿ ಕರ್ತವ್ಯವನ್ನು ಮುಗಿಸಿಕೊಂಡು ಗಸ್ತಿಗಾಗಿ ಮಲಿಯೂರು, ವಡ್ಡರಕೊಪ್ಪಲು ಗ್ರಾಮಗಳಲ್ಲಿ ಗಸ್ತು ಮಾಡಿ, ಬನ್ನೂರು ಪಟ್ಟಣಕ್ಕೆ ಬೆಳಿಗ್ಗಿನ ಜಾವ ಅಂದರೆ ದಿನಾಂಕ 26.01.2018 ರಂದು 1.15 ಗಂಟೆ ಸಮಯಕ್ಕೆ ಬಂದಿದ್ದು, ಮೈಸೂರು-ಮಳವಳ್ಳಿ ಮುಖ್ಯರಸ್ತೆಯಲ್ಲಿರುವ ಚಾಮುಂಡೇಶ್ವರಿ ಸ್ಕೂಟರ್ ಗ್ಯಾರೇಜ ಹತ್ತಿರ ಆರೋಪಿತರು ಮರೆಮಾಚಿ ನಿಂತುಕೊಂಡಿರುವುದು ಕಂಡು ಬಂದಿರುತ್ತದೆ. ನಾವು ಅವರನ್ನು ನೋಡಿ ಸ್ಥಳಕ್ಕೆ ಹೋಗಿದ್ದು, ಚಾಸಾ-1 ರವರು ಅವರನ್ನು ವಿಚಾರಣೆ ಮಾಡಿದ್ದಾಗ ಸದರಿಯವರು ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಸದರಿಯವರು ಅವರ ಹೆಸರುಗಳನ್ನು ಸಿದ್ದರಾಜು ಮತ್ತು

ಉಮೇಶ ಎಂದು ತಿಳಿಸಿದ್ದು, ಸದರಿಯವರು ಸಿದ್ದನಹುಂಡಿ ಗ್ರಾಮದ ನಿವಾಸಿಗಳೆಂದು ತಿಳಿಸಿರುತ್ತಾರೆ. ಸದರಿ ವ್ಯಕ್ತಿಗಳು ಅನುಮಾನಸ್ಪದವಾಗಿ ಇರುವ ಕಾರಣ ಚಾಸಾ-1 ರವರು ಪಂಚರನ್ನು ಸ್ಥಳಕ್ಕೆ ಬರಮಾಡಿಕೊಂಡಿದ್ದು, ಪಂಚರ ಸಮಕ್ಷಮ ಆರೋಪಿತರ ಅಂಗಶೋಧನೆ ಮಾಡಲಾಗಿ 1 ನೇ ಆರೋಪಿಯು ಧರಿಸಿದ ಪ್ಯಾಂಟನ ಹಿಂಭಾಗದಲ್ಲಿ 1 ½ ಅಡಿ ಉದ್ದದ 1 ಬೆರಳು ಗಾತ್ರದ ಕಬ್ಬಿಣದ ರಾಡು ಇರುವುದು ಕಂಡು ಬಂದಿದ್ದು, ಸದರಿ ಕಬ್ಬಿಣದ ರಾಡನ್ನು ಪಂಚರ ಸಮಕ್ಷಮ ಬೆಳಿಗ್ಗೆ 2.00 ರಿಂದ 2.30 ಗಂಟೆವರೆಗೆ ಜರುಗಿಸಿದ ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಳ್ಳಲಾಯಿತು. ಸದರಿ ವ್ಯಕ್ತಿಗಳನ್ನು ವಶಕ್ಕೆ ಪಡೆದು ಜೀಪಿನಲ್ಲಿ ಠಾಣೆಗೆ ಕರೆದುಕೊಂಡು ಬಂದಿದ್ದು, ಸದರಿಯವರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಕೃತ್ಯದ ಬಾಬ್ತು ಚಾಸಾ-1 ರವರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿ ಜಪ್ತುಪಡಿಸಿಕೊಂಡ ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-1 ಎಂದು ಗುರುತಿಸಲಾಗಿರುತ್ತದೆ. ಆರೋಪಿತರನ್ನು ನೋಡಿದರೇ ಗುರುತಿಸುತ್ತೇನೆ. ಆರೋಪಿತರು ಇಂದು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಸದರಿಯವರ ಗುರುತಿಸುವಿಕೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿಯ ಪರ ವಕೀಲರು ತಿಳಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ **ಎಸ್.ಪಿ.ಸಿ** ವಕೀಲರಿಂದಃ

ಚಾಸಾ-1 ನನ್ನ ಮೇಲಾಧಿಕಾರಿ ಎಂದರೆ ಸರಿ. ಸದರಿಯವರು ಹೇಳಿದಂತೆ ನಾನು ಕೇಳಬೇಕು ಎಂದರೆ ಸರಿ. ನಾವು ಠಾಣೆಯನ್ನು ದಿ.25.01.2018 ರಂದು ರಾತ್ರಿ 9 ಗಂಟೆಗೆ ಬಿಟ್ಟು ವಡ್ಗಲರಂಗನಾಥ ಸ್ವಾಮಿ ಬೆಟ್ಟಕ್ಕೆ ಹೋಗಿರುತ್ತೇವೆ. ವಡ್ಗಲರಂಗನಾಥ ಸ್ವಾಮಿ ಬೆಟ್ಟವನ್ನು ರಾತ್ರಿ 12 ಗಂಟೆ ಸಮಯದಲ್ಲಿ ಬಿಟ್ಟಿರುತ್ತೇವೆ. ನಾವು ಬಂದೋಬಸ್ತು ಹಾಗೂ ಗಸ್ತಿಗೆ ಹೋದ ಬಾಬ್ತು ಠಾಣಾ ದಿನಚರಿಯಲ್ಲಿ ನಮೂದು ಮಾಡುತ್ತೇವೆ ಎಂದರೆ ಸಾಕ್ಷಿಯು ಚಾಸಾ-1 ರವರು ನಮೂದು ಮಾಡುತ್ತಾರೆ ಎಂದು ನುಡಿಯುತ್ತಾರೆ. ಚಾಮುಂಡೇಶ್ವರಿ ಸ್ಕೂಟರ್ ಗ್ಯಾರೇಜ ಠಾಣೆಯಿಂದ ಮೈಸೂರಿಗೆ ಹೋಗುವ ದಾರಿಯಲ್ಲಿ ಇರುತ್ತದೆ.

ಬಂದೋಬಸ್ತಿನಿಂದ ಬಂದ ನಂತರ ನಾವು ಠಾಣೆಗೆ ಹೋಗಿರುವುದಿಲ್ಲ. ನಮ್ಮನ್ನು ನೋಡಿ ಆರೋಪಿತರು ಓಡಿ ಹೋಗಿರುವುದಿಲ್ಲ, ಆದರೆ ಮರೆಮಾಚಿ ನಿಂತುಕೊಂಡಿರುತ್ತಾರೆ. ಠಾಣೆಯಿಂದ ವಡ್ಗಲರಂಗನಾಥ ಸ್ವಾಮಿ ಬೆಟ್ಟಕ್ಕೆ ಹೋಗಿಲು 15 ನಿಮಿಷ ಬೇಕಾಗುತ್ತದೆ ಎಂದರೆ ಸಾಕ್ಷಿಯು 30 ನಿಮಿಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ, ಅದೇ ರೀತಿ ಠಾಣೆಗೆ ವಾಪಸ ಬರಲು 30 ನಿಮಿಷ ಸಾಕಾಗುತ್ತದೆ ಎಂದರೆ ಸರಿ. ಪಂಚರನ್ನು ಚಾಸಾ-1 ರವರ ಮೌಖಿಕ ಆದೇಶದ ಮೇರೆಗೆ ದೂರವಾಣಿ ಕರೆ ಮಾಡಿ ಕರೆಸಿರುತ್ತೇನೆ. ಸದರಿಯವರು ಬಂದಿದ್ದರು. ಪಂಚರು ಕೃತ್ಯ ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ಎಂ.ಓ-1 ಕಬ್ಬಿಣದ ರಾಡು ಆಗಿರುವುದಿಲ್ಲ, ಅದು ಬಾರಬೆಂಡಿಂಗ್ ಮಾಡಲು ಉಪಯೋಗಿಸುತ್ತಾರೆ ಎಂದರೆ ಸಾಕ್ಷಿಯು ಅದು ಕಬ್ಬಿಣದ ರಾಡನಂತಿರುತ್ತದೆ ಎಂದು ನುಡಿಯುತ್ತಾರೆ.

ಆರೋಪಿತರು ಕೃತ್ಯ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ, ಸದರಿಯವರಲ್ಲಿ ಒಬ್ಬ 1 ನೇ ಆರೋಪಿಯು ಸ್ನಾತಕೋತರ ಪದವಿ ವಿದ್ಯಾರ್ಥಿ ಎಂದರೆ ಸರಿ. 2 ನೇ ಆರೋಪಿ ಮಾನಸಿಕ ಅಸ್ವಸ್ಥ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತುಕೇಳಿಕೊಂಡು ಅವರಿಗೆ ಹೇಳಿಕೆ ನೀಡಿ ಅದರಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಎಂ.ಓ-1 ವಸ್ತುವನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**